# ಜಲ ಮಾಹಿತಿಗೆ ಕನ್ನಡದಲ್ಲೂ ಪೋರ್ಟಲ್

ಟೈಮ್ಸ್ ನ್ಯೂಸ್ ನೆಟ್‌ವರ್ಕ್

**ಬೆಂಗಳೂರು:** ನೀರಿನ ಬಗ್ಗೆ ಸಮಗ್ರ ಮಾಹಿತಿ ನೀಡುವ 'ಇಂಡಿಯಾ ವಾಟರ್ ಪೋರ್ಟಲ್' ಇನ್ನು ಕನ್ನಡದಲ್ಲೂ ಲಭ್ಯ. ಜಲ ಮಾಹಿತಿ ವಿನಿಮಯಕ್ಕೆ ವೆಬ್ ಆಧಾರಿತ ವೇದಿಕೆಯಾಗಿರುವ ಇಂಗ್ಲಿಷ್ ಪೋರ್ಟಲ್ ಕಳೆದ ವರ್ಷ ಬಿಡುಗಡೆಯಾಗಿತ್ತು.

ಈಗ ಪ್ರಾದೇಶಿಕ ಭಾಷೆಯ ಪೈಕಿ ಮೊದಲ ಬಾರಿಗೆ ಕನ್ನಡದಲ್ಲಿ ಹೊರತರಲಾದ ಪೋರ್ಟಲ್ ಅನ್ನು ರಾಜ್ಯ (www.indiawaterportal.org/kannada) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕೆ.ಜೈರಾಜ್ ಶುಕ್ರವಾರ ಬಿಡುಗಡೆ ಮಾಡಿದರು.

'ನೀರಿಗೆ ಸಂಬಂಧಿಸಿದ ವಿವಿಧ ವಿಚಾರಗಳ ಕುರಿತು ಮಾಹಿತಿ ವಿನಿಮಯ, ಚರ್ಚೆಗೆ ಇದೊಂದು ಸಮರ್ಥ ವೇದಿಕೆಯಾಗಿದೆ. ಜಲ ಸಂರಕ್ಷಣೆ ಕ್ಷೇತ್ರದ ಪರಿಣಿತರ ಅಭಿಪ್ರಾಯಗಳು ಇಲ್ಲಿವೆ. ಶೇ 20ಕ್ಕೂ ಹೆಚ್ಚು ಬರಹಗಳು ಕನ್ನಡದ ಮೂಲ ಲೇಖಕರಿಂದ ಕೂಡಿವೆ' ಎಂದು ಪೋರ್ಟಲನ್ನು ನಿರ್ವಹಿಸುತ್ತಿರುವ ಬೆಂಗಳೂರು ಮೂಲದ ಸಂಸ್ಥೆ 'ಅರ್ಘ್ಯಂ ಟ್ರಸ್ಟ್'ನ ಅಧ್ಯಕ್ಷೆ ರೋಹಿಣಿ ನೀಲೇಕಣಿ ತಿಳಿಸಿದರು.

'ನೀರಿನ ಬಗ್ಗೆ ಮಾಹಿತಿಯನ್ನು ಜನಸಾಮಾನ್ಯರಿಗೆ ತಲುಪಿಸುವ ಅಗತ್ಯ ಇದೆ. ಈ ಕ್ಷೇತ್ರದಲ್ಲಿ ನಡೆಯುತ್ತಿರುವ ವಿವಿಧ ಸಂಶೋಧನೆ, ಸಾಧನೆಗಳ ಬಗ್ಗೆ ಮಾಹಿತಿ ಲಭ್ಯವಾಗುವಂತೆ ನೋಡಿಕೊಳ್ಳುವುದು ಇದರ ಉದ್ದೇಶ. ಇತರೆ ಭಾಷೆಗಳಲ್ಲೂ ವೆಬ್ ಸೈಟ್ ಅನ್ನು ಹೊರತರಲಾಗುವುದು' ಎಂದು ಹೇಳಿದರು.

ಉದಯಕುಮಾರ್



ಪೋರ್ಟಲ್ ಬಿಡುಗಡೆ ಸಂದರ್ಭದಲ್ಲಿ ಅರ್ಘ್ಯಂ ಟ್ರಸ್ಟ್ ಅಧ್ಯಕ್ಷೆ ರೋಹಿಣಿ ನೀಲೇಕಣಿ ಹಾಗೂ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ ಕೆ.ಜೈರಾಜ್.

ಜಲಸಂರಕ್ಷಣೆ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಸ್ವಯಂ ಸೇವಾ ಸಂಸ್ಥೆಗಳು, ಸರ್ಕಾರಿ ಅಧಿಕಾರಿಗಳು, ಜಲತಜ್ಞರು, ಐಟಿ ತಜ್ಞರು, ಶಿಕ್ಷಣ ತಜ್ಞರು, ಆಸಕ್ತರು ಈ ಪೋರ್ಟಲ್‌ಗೆ ಕೊಡುಗೆ ನೀಡುತ್ತಾರೆ. ಇದರ ಬಗ್ಗೆ ಜನರಿಗೆ ಜಾಗೃತಿ ಮೂಡಿಸಲು ರಾಜ್ಯದ ಎಲ್ಲೆಡೆ 800ಕ್ಕೂ ಹೆಚ್ಚು ಕಿಯೋಸ್ಕ್‌ಗಳನ್ನು ಆರಂಭಿಸಲಾಗುವುದು ಎಂದು ರೋಹಿಣಿ ನೀಲೇಕಣಿ ಹೇಳಿದರು.

ಇದು ಏಕಮುಖಿ ಮಾಹಿತಿ ಕೇಂದ್ರವಲ್ಲ. ಸಾರ್ವಜನಿಕರು ತಮ್ಮ ಅನುಮಾನಗಳನ್ನು ದಾಖಲಿಸಿ ತಜ್ಞರಿಂದ ಉತ್ತರ ಪಡೆಯಬಹುದು ಎಂದು ಅರ್ಘ್ಯಂ ಟ್ರಸ್ಟ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುನೀತಾ ನಾದಮುನಿ ತಿಳಿಸಿದರು.

www.rohininilekani.org